# ಕನ್ನಡದ ಕನ್ನಡಿಯಲ್ಲಿ ಟಾಲ್‌ಸ್ಟಾಯ್ ಬರೆದ ಮಕ್ಕಳ ಕಥೆಗಳು




ರಷ್ಯನ್ ಮೂಲ: **ಲಿಯೋ ಟಾಲ್‌ಸ್ಟಾಯ್**
ಕನ್ನಡಕ್ಕೆ: **ಬಿ.ಆರ್. ಸತ್ಯನಾರಾಯಣ**
ಕಲೆ: ಸಂತೋಷ್ ಸಸಿಹಿತ್ಲು

**ಕಥೆ 1**

**ವಾಸು** ತನ್ನ ಹುಟ್ಟಿದ ಹಬ್ಬದ ದಿನದಂದು ಸಾಕಷ್ಟು ಉಡುಗೊರೆ ಪಡೆದಿದ್ದ. ಬಟ್ಟೆ, ಪುಸ್ತಕ, ಆಟಿಕೆ ಇವುಗಳ ನಡುವೆ ಅವನಿಗೆ ಇಷ್ಟವಾಗಿದ್ದು, ತನ್ನ ಮಾವ ಕೊಟ್ಟಿದ್ದ ಹಕ್ಕಿಗಳನ್ನು ಹಿಡಿಯುವ ಬಲೆ!

ಒಂದು ಚಿಕ್ಕ ಹಲಗೆಗೆ ಜೋಡಿಸಿದ ಚೌಕಟ್ಟಿಗೆ ಹೊಂದಿಕೊಂಡಂತೆ ಬಲೆಯಿತ್ತು. ಚೌಕಟ್ಟನಿಂದ ಬಿಡಿಸಿದ್ದ ಹಲಗೆಯ ಮೇಲೆ ಕಾಳುಗಳನ್ನು ಚೆಲ್ಲಿ, ಬಲೆಯನ್ನು ಜೋಡಿಸಿ, ಹಕ್ಕಿಗಳಿರುವಲ್ಲಿ ಇಟ್ಟರೆ ಸಾಕಿತ್ತು. ಹಾರಿ ಬಂದ ಹಕ್ಕಿ, ಕಾಳು ತಿನ್ನುವ ಅವಸರದಲ್ಲಿದ್ದಾಗ, ಹಲಗೆ ಚೌಕಟ್ಟಿಗೆ ಅಂಟಿಕೊಂಡು, ಹಕ್ಕಿ ಬಲೆಯೊಳಗೆ ಸಿಕ್ಕಿ ಹಾಕಿಕೊಳ್ಳುತ್ತಿತ್ತು.

ವಾಸು ಅತ್ಯಂತ ಖುಷಿಯಿಂದ ಓಡಿ ಹೋಗಿ ಬಲೆಯನ್ನು ತನ್ನ ಅಮ್ಮನಿಗೆ ತೋರಿಸಿದ. 'ಇದು ಒಳ್ಳೆಯ ಆಟಿಕೆಯಲ್ಲ. ಚಿಕ್ಕ ಹಕ್ಕಿಗಳನ್ನು ಹಿಡಿದು ನೀನೇನು ಮಾಡುತ್ತೀಯ? ಅವುಗಳನ್ನು ಹಿಂಸಿಸಲು ನೀನೇಕೆ ಇಷ್ಟಪಡುತ್ತೀಯ?' ಎಂದರು ಅಮ್ಮ. 'ಹಕ್ಕಿಗಳನ್ನು ಹಿಡಿದು ಪಂಜರದಲ್ಲಿಟ್ಟು, ನೀರು ಕಾಳು ಕೊಟ್ಟು ಸಾಕುತ್ತೇನೆ. ಅವು ಹಾಡುತ್ತವೆ' ವಾಸುವಿನ ಉತ್ತರ.

ವಾಸು ಒಂದಷ್ಟು ಕಾಳು ತೆಗೆದುಕೊಂಡು, ತೋಟಕ್ಕೆ ಓಡಿದ. ಬಲೆಯನ್ನು ಸಿದ್ಧಪಡಿಸಿ, ಹಲಗೆಯ ಮೇಲೆ ಕಾಳು ಚೆಲ್ಲಿ, ಅಲ್ಲೇ ನಿಂತು ಕಾಯತೊಡಗಿದ. ವಾಸು ಅಲ್ಲೇ ನಿಂತಿದ್ದರಿಂದ, ಎಷ್ಟು ಹೊತ್ತಾದರೂ ಯಾವ ಹಕ್ಕಿಯೂ ಬಲೆಯ ಹತ್ತಿರ ಬರಲಿಲ್ಲ.

ಬಲೆಯನ್ನು ತೋಟದಲ್ಲಿಯೇ ಬಿಟ್ಟು, ವಾಸು ಮನೆಗೆ ಊಟಕ್ಕೆ ಹೋದ. ಊಟ ಮುಗಿಸಿ ಮರಳಿ ತೋಟಕ್ಕೆ ಬಂದು ನೋಡಿದಾಗ, ಒಂದು ಪುಟಾಣಿ ಹಕ್ಕಿಯ ಮರಿ ಬಲೆಯಲ್ಲಿ ಸಿಕ್ಕಿಕೊಂಡಿತ್ತು! ವಾಸುವಿಗೆ ತುಂಬಾ ಖುಷಿಯಾಯಿತು. ಹಕ್ಕಿಯ ಮರಿಯನ್ನು ಹಿಡಿದು ಮನೆಗೆ ತಂದು 'ಅಮ್ಮ ನೋಡು. ನಾನು ಹಕ್ಕಿ ಹಿಡಿದುಬಿಟ್ಟೆ. ಇದು ಕೋಗಿಲೆಯೇ ಇರಬೇಕು. ಓ ಇದರ ಹೃದಯ ನೋಡು ಎಷ್ಟು ಜೋರಾಗಿ ಹೊಡೆದುಕೊಳ್ಳುತ್ತಿದೆ' ಎಂದ.

ಅದನ್ನು ಗಮನಿಸಿದ ಅಮ್ಮ 'ಅದು ಕೋಗಿಲೆಯಲ್ಲ; ಕಾಗೆಯ ಮರಿ. ಅದನ್ನೇಕೆ ಹಿಂಸಿಸುತ್ತೀಯಾ? ಅದನ್ನು ಬಿಟ್ಟುಬಿಡು, ಹೋಗಲಿ' ಎಂದರು.

'ಇಲ್ಲ. ನಾನು ಬಿಡುವುದಿಲ್ಲ. ಅದಕ್ಕೆ ಕಾಳು ನೀರು ನೀಡಿ ನಾನೇ ಜೋಪಾನವಾಗಿ ನೋಡಿಕೊಳ್ಳುತ್ತೇನೆ' ಎಂದ ವಾಸು. ಕಾಗೆಯ ಮರಿಯನ್ನು ಪಂಜರದಲ್ಲಿಟ್ಟು, ಅದಕ್ಕೆ ಕಾಳು ಹಾಕಿ, ಬಟ್ಟಲಿನಲ್ಲಿ ನೀರು ಇಟ್ಟ. ಮೊದಲೆರಡು ದಿನ, ಪಂಜರ ಸ್ವಚ್ಛಗೊಳಿಸಿ, ಹಕ್ಕಿಗೆ ಕಾಳು ನೀರು ಸರಿಯಾಗಿ ನೀಡಿದ್ದ ವಾಸು, ಒಂದು ದಿನ ನೀರು ಬದಲಿಸುವುದನ್ನು ಮರೆತುಬಿಟ್ಟ.

ಅದನ್ನು ಗಮನಿಸಿದ ಅಮ್ಮ 'ನೋಡು. ನೀನು